JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕನ್ನಡ ಜನಪದ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಕೊಡುಗೆಗಳು

ಮಂಜಪ್ಪ ಚಲವಾದಿ

## ಪ್ರವೇಶ

ಮಾನವ ಸಂಸ್ಕೃತಿಯನ್ನು ಅಧ್ಯಯನ ನಡೆಸುವ ಶಾಸ್ತ್ರಗಳಲ್ಲಿ ಜಾನಪದ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ಸಂಸ್ಕೃತಿಯನ್ನು ಜನಪದ ಸಂಸ್ಕೃತಿ ಮತ್ತು ಶಿಷ್ಟ ಸಂಸ್ಕೃತಿ ಎಂದು ಎರಡು ಅಂಗಗಳಲ್ಲಿ ಗುರುತಿಸಲಾಗುತ್ತದೆ. ಮಾನವಶಾಸ್ತ್ರ ಸಮಗ್ರ ಸಂಸ್ಕೃತಿಯನ್ನು ಅಧ್ಯಯನ ಮಾಡಿದರೆ, ಜಾನಪದ ಪರಂಪರಾಗತ ವಿಷಯಗಳನ್ನು ಪ್ರತ್ಯೇಕಿಸಿಕೊಂಡು ತನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳುತ್ತದೆ. ಸಹಸ್ರಾರು ವರ್ಷಗಳ ಮಾನವ ಜೀವನ ಯಾತ್ರೆಯಲ್ಲಿ ಒಂದು ಕಾಲಕ್ಕೆ ಜೀವನದ ಸಮಸ್ತ ವ್ಯಾಪಾರವೂ ಕಂಠಸ್ಥ ಸಂಸ್ಕೃತಿಯ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿತ್ತು. 'ಕಂಠಸ್ಥ ಸಂಸ್ಕೃತಿ' ಶಿಷ್ಟ ಸಂಸ್ಕೃತಿಯ ಉದಯದಿಂದ ಮುಕ್ಕಾಗಲಿಲ್ಲ. ತನಗೆ ಅನುಕೂಲವಾದ ಪರಿಸರದಲ್ಲಿ ಅದು ಉಳಿದುಕೊಂಡೇ ಬಂದಿತು. ಇದನ್ನೇ ವಿದ್ವಾಂಸರು 'ಜಾನಪದ' ಎಂದು ಕರೆದರು. ಜಾನಪದದ ಸಾಂಸ್ಕೃತಿಕ ಮಹತ್ವವನ್ನು ಅರಿತ ವಿದ್ವಾಂಸರು ಅದನ್ನು ಶಿಷ್ಟ ಸಂಸ್ಕೃತಿಯಿಂದ ಪ್ರತ್ಯೇಕಿಸಿಕೊಂಡು ಅಧ್ಯಯನ ಮಾಡತೊಡಗಿದರು. ೧೯ನೇ ಶತಮಾನದ ಮಧ್ಯಭಾಗದಲ್ಲಿ ಈ ಈಱಝಇಾಟಱಊಜ ಶಬ್ದದ ಸೃಷ್ಟಿಯಾದ ಮೇಲೆ ಅದರ ವಿವರಣೆಗೆ ಅನೇಕ ವಿದ್ವಾಂಸರು ಪ್ರಯತ್ನಿಸಿದರು.

ಎಡ್ರಿನ್ ಸಿಡ್ನಿ ಹಾರ್ಸ್‌ಲ್ಯಾಂಡ್ ಪ್ರಕಾರ 'ಜೀವನದ ರೀತಿನೀತಿಗಳು, ಆಚಾರವಿಚಾರಗಳು, ಸಂಪ್ರದಾಯ ನಂಬಿಕೆಗಳು, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ, ಸಾಗಿ ಬರುತ್ತವೆ' ಎಂದಿದ್ದಾನೆ. ಬಿ.ಎ. ಬಾಟ್ಕಿನ್' 'ಖಟ ಚ ರಿಣಊಜ಩ಥಿ ಊಚಿಟ ಥಿಣಝಣಣಊಜ ಜಱಱಥಿ ಣಖುಉಂ಻ ಜಿಱಝಇಾಟಱಊಜ' ಎಂದಿದ್ದಾನೆ. ಎಸ್ಪಿ ಮೆರಿಸಾರ ಪ್ರಕಾರ 'ಜಾನಪದ ಒಂದು ದೊಡ್ಡ ಅನುಭವ ಭಂಡಾರ'. ಬೊಯಸ್ ಎಂಬ ವಿದ್ವಾಂಸ ಜಿಱಝಇಾಟಱಊಜ಻ ಟಱಾ ಚ ಱಥಿಜಱಥಿಜ ಚಿಳಥಿಾಾ ಚ ಜಿಱಝಇಾ ಥಿಾಾ ಋಖಜ ಣಡಿಚಿಜಱಾಱಉಚಿಟ ಜಿಱಝಇಾ ಱಥಿಜಱಥಿಜ ಚಿಟಜ ಜಿಱಝಇಾ ರಿಱಾಡಿಥಿ ಎಂದು ಹೇಳಿದ್ದಾನೆ.

ಈ ಹಿನ್ನೆಲೆಯಲ್ಲಿ ಕನ್ನಡ ಜನಪದ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಕೊಡುಗೆಗಳು ಅಪಾರವಾದುದು. ಅದನ್ನು ಸ್ವಾತಂತ್ರ್ಯ ಪೂರ್ವದ ಮತ್ತು ಸ್ವಾತಂತ್ರ್ಯೋತ್ತರದ ಕಾಲಘಟ್ಟಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಚರ್ಚಿಸಲಾಗಿದೆ.

## ಸ್ವಾತಂತ್ರ್ಯ ಪೂರ್ವದಲ್ಲಿ

ಕನ್ನಡದಲ್ಲಿ ಜಾನಪದ ಅಧ್ಯಯನ ಸುಮಾರು ಒಂದುನೂರು ವರ್ಷಗಳ ಹಿಂದೆಯೇ ಆರಂಭವಾಯಿತು, 'ಜಾನಪದ ಸಂಗ್ರಹ' ಮತ್ತು 'ಅಧ್ಯಯನ'ವನ್ನು ಮೊದಲು ಆರಂಭಿಸಿದವರು ಪಾಶ್ಚಾತ್ಯರೇ ಎಂಬುದು ಗಮನಾರ್ಹ. ಆದರೆ ಪಾಶ್ಚಾತ್ಯರಿಗೆ ಜಾನಪದದ ಬಗ್ಗೆ ನೇರವಾದ ಆಸಕ್ತಿ ಏನೂ ಇರಲಿಲ್ಲ, ಮತಪ್ರಚಾರ ಹಾಗೂ ಆಡಳಿತದ ಸುಸೂತ್ರೆಯ ಕಾರಣದಿಂದ ಇಲ್ಲಿನ ಭಾಷೆ ಮತ್ತು ಸಂಸ್ಕೃತಿಯನ್ನು ಅರಿತುಕೊಳ್ಳುವುದು ಅತ್ಯಗತ್ಯ ಎಂಬುದನ್ನು ಕಂಡುಕೊಂಡ ಅವರು ಈ ಪ್ರಯತ್ನದ ದಿಸೆಯಲ್ಲಿ ಸಹಜವಾಗಿಯೇ ಇಲ್ಲಿನ ಜಾನಪದದ ಕೆಲವು ಪ್ರಕಾರಗಳ ಬಗ್ಗೆ ಆಕರ್ಷಿತರಾದರು. ಭಾರತೀಯ ಜಾನಪದದ ಆದರಲ್ಲೂ ಕನ್ನಡ ಜಾನಪದದ ಬಗ್ಗೆ, ಕೆಲವು ಅಮೂಲ್ಯವಾದ ದಾಖಲೆಗಳು ಎಡ್ಗರ್ ಥರ್ಸ್ಟನ್, ಆಬೆ ಡುಬೋಯಿಸ್, ಕೆ, ಮೆಕೆಂಜಿ, ಮೇರಿಫ್ರೇರೆ, ಗೋವರ್, ಫ್ಲೀಟ್, ಕಿಟಲ್ ಮೊದಲಾದವರ ಕೃತಿಗಳಲ್ಲಿ ಸಿಗುತ್ತವೆ. ಅಬೆ ಡುಬೋಯಿಸ್‌ವರ ಹಿಂದೂ ಮ್ಯಾನರ್ಸ್ ಋಖಜ ತಱಟಜಱಾ ಜಿಜಱಳಿಣ. ಋಖಜ ಏಣಱಚಿತಿಚಿಜಖ ಱಿ ಊಚಿಳಚಿಟಿ ಆಱಾಡಿಱಬಿಣ ಕನ್ನಡ ಜಾನಪದ ಸಂಸ್ಕೃತಿಯ ರೀತಿನೀತಿ, ಆಚಾರ ವಿಚಾರ, ಸಂಪ್ರದಾಯ ಮೊದಲಾದವುಗಳ ಬಗ್ಗೆ ಕೆಲವು ಮಾಹಿತಿಗಳು ಸಿಗುತ್ತವೆ. ಥರ್ಸ್ಟನ್ ಅವರ ಅಚಿಣಝಣಡಿಱಜಱಿ ಋಾಾಖ ಖಟಜಱಿ ದಲ್ಲಿ ದಕ್ಷಿಣ ಭಾರತದ ಪ್ರತಿಯೊಂದು ಬುಡಕಟ್ಟುಗಳ ಉಗಮವನ್ನು ಕುರಿತಾದ ಕಥೆ, ಸಂಪ್ರದಾಯ, ವೃತ್ತಿ ಮೊದಲಾದ ವಿವರಗಳನ್ನು ಅತ್ಯಂತ ವ್ಯವಸ್ಥಿತವಾಗಿ ಪರಿಚಯಿಸಲಾಗಿದೆ. ಕನ್ನಡಕ್ಕೆ ಇಂದೂ ಅಧಿಕೃತವೆನಿಸುವಂಥ

ನಿಘಂಟುಗಳನ್ನು ಸಿದ್ಧಪಡಿಸಿದ ರೆವರೆಂಡ್ ಎಫ್. ಕಿಟಲ್ ಮತ್ತು ವಿಲಿಯಂ ರೀವ್ ಅವರು ತಮ್ಮ ನಿಘಂಟುಗಳಲ್ಲಿ ಶಬ್ದಾರ್ಥ ಸ್ಪಷ್ಟತೆಗಾಗಿ ಅನೇಕ ಗಾದೆಗಳನ್ನೂ ನುಡಿಗಟ್ಟುಗಳನ್ನೂ ಉಲ್ಲೇಖಿಸಿದ್ದಾರೆ.

ಕಿಟಲ್ ಕೋಶದಲ್ಲಿರುವ ಗಾದೆಗಳಲ್ಲಿ ಕೆಲವು ದಿನನಿತ್ಯ ಕೇಳಿ ಬರುವಂಥವು. ಇನ್ನೂ ಕೆಲವು ತುಂಬ ಅಪೂರ್ವವಾದಂಥವು. ಕಿಟಲ್ ಕೋಶದ ಗಾದೆಗಳನ್ನೆಲ್ಲ ಸಂಗ್ರಹಿಸಿ ರಾಗೌ ಅವರು 'ಕಿಟಲ್' ಕೋಶದ ಗಾದೆಗಳು' ಎಂಬ ಸಂಪಾದನಾ ಗ್ರಂಥವನ್ನೇ ಪ್ರಕಟಿಸಿದ್ದಾರೆ. ಇದರಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಗಾದೆಗಳಿವೆ ಎಂಬುದನ್ನು ಗಮನಿಸಿದಾಗ ಕಿಟಲ್ ಕೋಶದ ಮಹತ್ವದ ಅರಿವಾಗಬಹುದು. ಕನ್ನಡ ಜನಪದ ಸಾಹಿತ್ಯಕ್ಕೆ ಫ್ಲೀಟರ್ ಕೊಡುಗೆಯೂ ಮಹತ್ವದ್ದು, ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಹಲವಾರು ಅವರು ಸಂಗ್ರಹಿಸಿದರು. ಇವುಗಳನ್ನು ಸಂಗ್ರಹಿಸುವಾಗ ಅವರು ಅಪ್ರಜ್ಞಾಪೂರ್ವಕವಾಗಿಯೇ ಜನಪದ ಸಂಗ್ರಹದ ಕೆಲವು ನಿಯಮಗಳನ್ನು ಅನುಸರಿಸಿದರು. ಲಾವಣಿಗಳ ರಾಜಕೀಯ, ಸಾಮಾಜಿಕ ಹಿನ್ನೆಲೆ, ಹಾಡುವ ಕ್ರಮ ಲಯದ ವಿವರಗಳನ್ನು ಅವರು ಗುರುತಿಸಿ ದಾಖಲಿಸಿದ್ದಾರೆ. ಆದರೂ ಪಾಶ್ಚಾತ್ಯರ ಈ ಪ್ರಯತ್ನಗಳು ಜನಪದ ಸಾಹಿತ್ಯದತ್ತ ಕಣ್ಣುಬಿಟ್ಟು ನೋಡುವಂತಹ ಸಂವೇದನೆಯನ್ನೇನೂ ಹುಟ್ಟಿಸಲಿಲ್ಲ.

ನವೋದಯ ಚಳುವಳಿಯೊಂದಿಗೆ ಜನಪದ ಸಾಹಿತ್ಯವನ್ನು ಕುರಿತು ತೀವ್ರ ಆಸಕ್ತಿ ಬೆಳೆಯಿತು ಎಂದು ಜನಪದ ಸಾಹಿತ್ಯ ಅಧ್ಯಯನದ ಚರಿತ್ರೆಯನ್ನು ಅವಲೋಕಿಸುತ್ತ ವಿದ್ವಾಂಸರು ಗುರುತಿಸಿದ್ದಾರೆ. ನವೋದಯ ಸಾಹಿತ್ಯದಲ್ಲಿದ್ದ ಶಿಷ್ಯ ಪ್ರಶ್ನೆ ದೇಶಪ್ರೇಮ, ಸ್ವಾತಂತ್ರ್ಯವೇಕ್ಷೆ ಇವೇ ಮೊದಲಾದವು ಜನಪದ ಸಾಹಿತ್ಯದತ್ತ ಕಣ್ಣು ಹಾಯಿಸುವಂತೆ ಮಾಡಿದವು, ಈ ರೀತಿ ಆಗಿದ್ದು ಭಾರತದಲ್ಲಿ ಮಾತ್ರವೇ ಅಲ್ಲ, ವಸಾಹತೀಕರಣಕ್ಕೊಳಗಾದ ಬಹುತೇಕ ದೇಶದಲ್ಲಿ ಜನಪದ ಸಾಹಿತ್ಯದ ಅಧ್ಯಯನ ದೇಶೀಯ ಸಂಸ್ಕೃತಿಯ ವೈಭವೀಕರಣಕ್ಕಾಗಿಯೇ ಆರಂಭವಾಯಿತು ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಪಾಶ್ಚಾತ್ಯರಲ್ಲಿ ನಡೆದ ಜಾನಪದ ಅಧ್ಯಯನಗಳಿಗೂ ನಮ್ಮಲ್ಲಿನ ಜಾನಪದ ಅಧ್ಯಯನಕ್ಕೂ ಒಂದು ಮುಖ್ಯ ವ್ಯತ್ಯಾಸವೆಂದರೆ ಪಾಶ್ಚಾತ್ಯರು ಸಮಾಜ ಶಾಸ್ತ್ರೀಯ ಹಾಗೂ ಮಾನವ ಶಾಸ್ತ್ರೀಯ ದೃಷ್ಟಿಯಿಂದ ಜಾನಪದ ಅಭ್ಯಾಸಕ್ಕೆ ತೊಡಗಿದರೆ; ನಮ್ಮ ವಿದ್ವಾಂಸರು ಸಾಹಿತ್ಯಕ ದೃಷ್ಟಿಯಿಂದ ಜಾನಪದ ಅಧ್ಯಯನಕ್ಕೆ ತೊಡಗಿದರು. ಹೀಗಾಗಿ ನಮ್ಮವರ ಗಮನ ಜನಪದ ಸಾಹಿತ್ಯದ ಗೀತೆ, ಕಾವ್ಯ, ಗಾದೆ, ಕಥೆ, ಒಗಟು, ಮೊದಲಾದ ಸಾಹಿತ್ಯಕ ಪ್ರಕಾರಗಳತ್ತಲೇ ಕೇಂದ್ರಿಕೃತವಾಗಿ ಜಾನಪದ ಸಂಸ್ಕೃತಿಯ ಇನ್ನಿತರ ವಿಚಾರಗಳು ಕಡೆಗಣಿತವಾದವು. ಜನಪದ ಸಾಹಿತ್ಯದಲ್ಲಿಯೂ ಸಹ ಗೀತೆಗಳ ಪ್ರಕಾರವೇ ಹೆಚ್ಚು ಗಮನ ಸೆಳೆಯಿತು. ಜನಪದ ಗೀತೆಗಳ ಸರಳತೆ, ಸ್ವಾಭಾವಿಕ ಚೆಲುವು, ಆಡುನುಡಿಯ ಸೊಗಸು, ಇಂಪಾದ ಸಂಗೀತ ಇವು ಮುಖ್ಯ ಆಕರ್ಷಣೆಗಳಾದವು. ಜನಪದ ಸಾಹಿತ್ಯದ ಸೊಗಸು, ಇಂಪಾದ ಸಂಗೀತ ಇವು ಮುಖ್ಯ ಆಕರ್ಷಣೆಗಳಾದವು. ಜನಪದ ಸಾಹಿತ್ಯದ ಸೊಗಸು, ಜೀವಂತಿಕೆ, ಸಾಂಸ್ಕೃತಿಕ ಮಹತ್ವ ಮೊದಲಾದ ವಿಚಾರಗಳನ್ನು ಪ್ರತಿಪಾದಿಸಿದ ವಿದ್ವಾಂಸರೆಲ್ಲರೂ ಜನಪದ ಗೀತೆಗಳನ್ನು ಗಮನದಲ್ಲಿಟ್ಟುಕೊಂಡಿದ್ದರಿಂದ ಆ ಮುಂದಿನ ಜಾನಪದ ಅಧ್ಯಯನದಲ್ಲಿ ಗೀತೆಗಳಿಗೆ ಎಲ್ಲಿಲ್ಲದ ಪ್ರಾಧಾನ್ಯತೆ ಬಂದಿತು. ಸಾಹಿತ್ಯಕ ದೃಷ್ಟಿಯಿಂದ ಉತ್ಕೃಷ್ಟವೆನಿಸಿದ ಗೀತ ಸಂಗ್ರಹಗಳು ಪ್ರಕಟವಾಗತೊಡಗಿದವು. ಹಲಸಂಗಿ ಗೆಳೆಯರು ಎಂದು ಪ್ರಸಿದ್ಧವಾದ ಗುಂಪಿನ ಕಾಪಸೆ ರೇವಪ್ಪ, ಸಿಂಪಿಲಿಂಗಣ್ಣ ಹಾಗೂ ಮಧುರಚೆನ್ನ ಅವರು ಸೇರಿ ೧೯೩೧ರಲ್ಲಿ ಪ್ರಕಟಿಸಿದ 'ಗರತಿಯ ಹಾಡು' ಎಂಬ ಜನಪದ ತ್ರಿಪದಿಗಳ ಸಂಕಲನ ಅತ್ಯಂತ ಪ್ರಸಿದ್ಧವಾದುದು. ಗರತಿಯ ಹಾಡು ಪ್ರಕಟವಾಗಿ ಈಗಾಗಲೇ ಅರ್ಧ ಶತಮಾನ ಕಳೆದಿದ್ದರೂ ಇಂದಿಗೂ ಅದು ಅನೇಕ ದೃಷ್ಟಿಗಳಿಂದ ಉತ್ತಮ ಸಂಕಲನವೆಂದು ಪರಿಗಣಿಸಲ್ಪಡುತ್ತಿದೆ. ಈ ಸಂಕಲನದಲ್ಲಿ ಬಿ.ಎಂ.ಶ್ರೀ. ಬೇಂದ್ರೆ, ಮಾಸ್ತಿ ಯವರಂತಹ ವಿದ್ವಾಂಸರು ಪ್ರಸ್ತಾವನೆ, ಪರಿಚಯ ಬರಹ, ಆಶೀರ್ವಾದ ನುಡಿಗಳನ್ನು ಬರೆದಿದ್ದಾರೆ. 'ಗರತಿಯ ಹಾಡು' ಪರಿಶುದ್ಧ ತಿಪದಿಗಳಿಗೆ ವಿಶ್ವಾಸಾರ್ಹ ಆಕರ, ಉತ್ತರ ಕರ್ನಾಟಕದ ಆಡುಮಾತಿನ ಬಂಧ ಬಳುಕುಗಳನ್ನು ಹೊತ್ತು ಹುಟ್ಟಿರುವ ಈ ತ್ರಿಪದಿಗಳಿಗೆ ಸರಿಮಿಗಿಲೆನ್ನಿಸುವ ಜನಪದ ಗೀತ ಸಂಗ್ರಹಗಳು ಕನ್ನಡದಲ್ಲಿ ಬಹಳವಿಲ್ಲ" ಎಂಬ ಮಾತು ಉಪೇಕ್ಷೆಯಲ್ಲ, ಗರತಿಯ ಹಾಡು ಅಂದಿನ ಜಾನಪದಾಸಕ್ತರಿಗೆ ಒಂದು ಮಾದರಿ ಸಂಕಲನವಾಯಿತು. ಇದರ ಮಾದರಿಯನ್ನನುಸರಿಸಿ, ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಮುತುವರ್ಜಿವಹಿಸಿ ಸಂಗ್ರಹಿಸುವ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಲು ಅನೇಕರು ವೈಯಕ್ತಿಕ ಆಸಕ್ತಿ ತಾಳಿ ಮುಂದೆ ಬಂದದ್ದರ ಜೊತೆಗೆ ಪತ್ರಿಕೆಗಳೂ ಸಂಗ್ರಹ ಮತ್ತು ಪ್ರಕಟಣೆಗಳಿಗೆ ಪ್ರೋತ್ಸಾಹ ನೀಡಿದವು. ಧಾರವಾಡದ ಜಯಕರ್ನಾಟಕ, ಮೈಸೂರಿನ ಪ್ರಬುದ್ಧ ಕರ್ನಾಟಕ, ಸಾಹಿತ್ಯ ಪರಿಷತ್ ಪತ್ರಿಕೆಗಳನ್ನು ಇಲ್ಲಿ ಮುಖ್ಯವಾಗಿ ಉಲ್ಲೇಖಿಸಬಹುದು.

ಮೂವತ್ತರ ದಶಕದಲ್ಲಿಯೇ ಪ್ರಕಟವಾದ ಇನ್ನಿತರ ಜನಪ್ರಿಯ ಗೀತ ಸಂಕಲನಗಳೆಂದರೆ, ಸಿಂಪಿಲಿಂಗಣ್ಣ ಮತ್ತು ಪಿ. ಧೂಲಾಸಾಹೇಬ ಅವರು ಜೊತೆಗೂಡಿ ಪ್ರಕಟಿಸಿದ 'ಜೀವನ ಸಂಗೀತ' ಎಂಬ ಲಾವಣಿಗಳ ಸಂಗ್ರಹ, ಕಾಪಸೆ ರೇವಪ್ಪನವರು 'ಮಲ್ಲಿಗೆ ದಂಡೆ' ಕಾರವಾರ ಜಿಲ್ಲೆಯ ತ್ರಿಪದಿಗಳನ್ನು ಪರಿಚಯಿಸುವ ವಿರೋಟ ವೆಂಕಟನಾಯಕ ತೊರ್ಕೆಯವರ 'ಹಳ್ಳಿಯ

ಹಾಡುಗಳು', ಬಿ.ಎಸ್. ರಂಗಸ್ವಾಮಿಯವರ 'ಹಳ್ಳಿಯ ಪದಗಳು' ಗೊರೂರು ರಾಮಸ್ವಾಮಿ ಅಯ್ಯಂಗಾರರು ಸಂಗ್ರಹಿಸಿಕೊಟ್ಟ 'ಹಳ್ಳಿಯ ಹಾಡುಗಳು' ಮೊದಲಾದವು.

ಜಾನಪದವೆಂದರೆ ಜನಪದ ಗೀತೆಗಳೇ ಎಂಬ ಪರಿಕಲ್ಪನೆಯ ಪ್ರಕಾರ ಸಂಗ್ರಹ ಕಾರ್ಯ ವಿಫಲವಾಗಿ ನಡೆಯುತ್ತಿದ್ದ ಕಾಲದಲ್ಲಿಯೂ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಜಾನಪದದ ಸಮಸ್ತ ಪ್ರಕಾರವನ್ನು ಜನಪದ ಸಂಸ್ಕೃತಿ ಎಂಬ ದೃಷ್ಟಿಯಿಂದ ಪರಿಚಯಿಸುವ ಎರಡು ಅತ್ಯುತ್ತಮ ಕೃತಿಗಳು ಪ್ರಕಟವಾಗಿದ್ದು ಗಮನಾರ್ಹ. ಜಾನಪದ ಸ್ವರೂಪದ ಬಗ್ಗೆ ತಿಳಿಸಿಕೊಡುವ ಆ ಕಾಲದ ಮತ್ತೊಂದು ಮಹತ್ವದ ಕೃತಿಯೆಂದರೆ ದೇವುದು ನರಸಿಂಹಶಾಸ್ತ್ರೀಯವರು ಸಂಸ್ಕೃತಿ ಎಂದರೆ 'ಒಂದು ಜನತೆಯ ಸಮಗ್ರ ಜೀವನ ಕ್ರಮ' ಎಂದು ಹೇಳುತ್ತಾ ಕನ್ನಡ ನಾಡಿನ ಸಂಸ್ಕೃತಿ ಸಮೀಕ್ಷೆಯಲ್ಲಿ ಜಾನಪದವನ್ನು ಪರಿಗಣನೆಗೆ ತೆಗೆದುಕೊಂಡಿರುವುದು ಈ ಗ್ರಂಥದ ಮಹತ್ವ ಜಿಖಙಾ ಟಘಿಜ ಎಂಬ ಪದ ಜನಪದ ಸಂಸ್ಕೃತಿಯನ್ನು ಸೂಚಿಸುವ ಪದ ಎಂದು ಹೇಳುತ್ತ ಜಿಖಙಾ ಟಘಿಜ ಎಂಬ ಪದವನ್ನು ಮೊದಲ ಬಾರಿಗೆ ಬಳಸಿದ ದೇವುಡು ಅವರದಾಗಿದೆ.

ಈ ಕಾಲದಲ್ಲಿ ಜನಪದ ಸಾಹಿತ್ಯವನ್ನು ಕುರಿತು ಅಧ್ಯಯನಗಳು ಎಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯತೊಡಗಿದವೆಂದರೆ ಕರ್ನಾಟಕದಲ್ಲಿ ಇದೇ ಒಂದು ಪ್ರಧಾನವಾದ ಸಾಹಿತ್ಯ ಚಟುವಟಿಕೆ ಎಂಬಂತಾಯಿತು, ಸಾಹಿತ್ಯ ಕ್ಷೇತ್ರದ ದಿಗ್ಗಜಗಳೆಲ್ಲರೂ ಜನಪದ ಸಾಹಿತ್ಯದ ಪ್ರಚಾರದಲ್ಲಿ ತೀವ್ರವಾಗಿ ತೊಡಗಿಕೊಂಡದ್ದು ಅತ್ಯಂತ ಗಮನಾರ್ಹ, ಮಾಸ್ತಿ, ದೇವುಡು, ಬಿ.ಎಂ.ಶ್ರೀ., ಶ್ರೀ.ನಂ.ಶ್ರೀ. ಬೆಟಗೇರಿಕೃಷ್ಣಶರ್ಮ, ಎಸ್.ವಿ. ರಂಗಣ್ಣ, ಗೊರೂರು ರಾಮಸ್ವಾಮಿ ಅಯ್ಯಂಗಾರ ಮೊದಲಾದ ವಿದ್ವಾಂಸರು ತಮ್ಮ ಉಪನ್ಯಾಸ, ಲೇಖನ, ಸಾಹಿತ್ಯಕ ಚರ್ಚೆಗಳಲ್ಲಿ ಜನಪದ ಸಾಹಿತ್ಯದ ಸೊಗಸು, ಅದನ್ನು ಸಂಗ್ರಹಿಸುವ ಅಗತ್ಯವಿದೆ. ಕನ್ನಡ ನಾಡಿನ ಸಂಸ್ಕೃತಿ ಅದರಲ್ಲಿ ಪ್ರತಿಬಿಂಬಿಸುವ ಬಗೆಯನ್ನು ಕುರಿತು ಸೋದಾಹರಣವಾಗಿ ಪ್ರತಿಪಾದಿಸಿದರು. ಇದರಿಂದ ಜನಸಾಮಾನ್ಯರೂ – ವಿದ್ವಾಂಸರು – ಜನಪದ ಸಾಹಿತ್ಯದತ್ತ ಪ್ರೀತಿ ಮತ್ತು ಆಸಕ್ತಿಯನ್ನು ಬೆಳಸಿಕೊಳ್ಳುವಂತಾಯಿತು.

### ಸ್ವಾತಂತ್ರೋತ್ತರದಲ್ಲಿ

ಸ್ವಾತಂತ್ರೋತ್ತರದಲ್ಲಿ ಆರಂಭಕಾಲದಲ್ಲಿ ಜನಪದಗೀತೆಗಳ ಕ್ಷೇತ್ರಕ್ಕೆ ಆಪಾರ ಕೊಡುಗೆ ನೀಡಿದ ಇಬ್ಬರು ಮಹನೀಯರೆಂದರೆ ಉತ್ತರ ಕರ್ನಾಟಕದಲ್ಲಿ ಡಾ. ಬಿ. ಎಸ್. ಗದ್ದಗೀಮಠ, ದಕ್ಷಿಣ ಕರ್ನಾಟದಲ್ಲಿ ಕ.ರಾ.ಕೃ., ಗದ್ದಗೀಮಠರು ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಕ್ಷೇತ್ರಕಾರ್ಯ ನಡೆಸಿದರು. ಅಲ್ಲಿನ ವೈವಿಧ್ಯ ಪೂರ್ಣವಾದ ಜನಪದ ಗೀತೆಗಳನ್ನು ಪರಿಚಯಿಸುವ ಅವರ ಒಟ್ಟು ಆರು ಕೃತಿಗಳು ೧೯೬೨ ರಿಂದ ೧೯೬೦ ರವರೆಗಿನ ಅವಧಿಯಲ್ಲಿ (ನಾಲ್ಕು ನಾಡಪದಗಳು, ಕಂಬಿಯ ಹಾಡುಗಳು, ಜನತಾ ಗೀತೆಗಳು, ಕುಮಾರ ರಾಮನ ದುಂದುಮೆ, ಮಲ್ಲಮಲ್ಲಣಿ, ಲೋಕಗೀತೆಗಳು) ಪ್ರಕಟವಾದವು. "ಹವ್ಯಾಸಿ ಸಂಗ್ರಾಹಕರ ಸಂಕಲನಗಳಿಗಿಂತ, ಗದ್ದಗಿಮಠರ ಸಂಕಲನಗಳು ಸಂಶೋಧಕ ಮೌಲ್ಯ, ಅಧ್ಯಯನ ಶಿಸ್ತಿನಿಂದ ಮೌಲಿಕ, ತಾವು ಸಂಗ್ರಹಿಸಿದ ಗೀತ ಸಂಪತ್ತನ್ನು ವಸ್ತು ರೂಪಗಳಿಗೆ ಅನುಗುಣವಾಗಿ ವರ್ಗೀಕರಿಸಿ ಆಯಾ ಪ್ರಕಾರಗಳ ಪ್ರದೇಶಿಕ ವೈಶಿಷ್ಟ್ಯ, ಐತಿಹಾಸಿಕ ಹಿನ್ನೆಲೆ, ಸ್ಥಾನಿಕ ಮಹತ್ವ, ಸಾಂದರ್ಭಿಕ ಹಿನ್ನಲೆ ಮುಂತಾದ ವಿವರಣೆಗಳೊಂದಿಗೆ ಪ್ರಕಟಿಸಿದ್ದು ಜಾನಪದ ಕ್ಷೇತ್ರದಲ್ಲಿ ಅವರಿಗಿದ್ದ ವಿದ್ವತ್ತಿಗೆ ನಿದರ್ಶನ", ಜಾನಪದ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ಅವರ ಅರ್ಥಪೂರ್ಣ ಪ್ರಸ್ತಾವನೆಗಳು ಅವರ ಸಂಕಲನಗಳ ಮಹತ್ವವನ್ನು ಹೆಚ್ಚಿಸಿವೆ. ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ, ಡಾಕ್ಟರೇಟ್ ಪದವಿ ಪಡೆದ ಪ್ರಪ್ರಥಮ ವ್ಯಕ್ತಿ ಎಂಬ ಕೀರ್ತಿಯೂ ಗದ್ದಗೀಮಠ ಅವರಿಗೆ ಸಲ್ಲುತ್ತದೆ.

ಸ್ವಾತಂತ್ರ್ಯೋತ್ತರ ಆರಂಭ ಕಾಲದಲ್ಲಿ ಜಾನಪದಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಕೆಲವು ಮುಖ್ಯ ಕೃತಿಗಳೆಂದರೆ, ಗೊ.ರು ಚನ್ನಬಸಪ್ಪನವರ 'ದಾಗೂರ ನಾಗಮ್ಮ ಮತ್ತು ಇತರ ಹಾಡುಗಳು, ಸಾ. ಚ. ಮಹದೇವ ನಾಯ್ಕರ 'ಹಳ್ಳಿಯ ಹಾಡುಗಳು' ಎಸ್.ಕೆ. ಕರೀಂಖಾನ್ ಅವರ 'ಜಾನಪದ ಗೀತ ಸಂಗ್ರಹಗಳು'. ಕೆ. ಆರ್. ಲಿಂಗಪ್ಪನವರ 'ಮಾನಮಿಯ ಪದಗಳು'. ೧೯೬೦ರ ದಶಕದವರೆಗೆ ಕನ್ನಡ ಜಾನಪದ ಕ್ಷೇತ್ರದಲ್ಲಿ ನಡೆದ ಅಧ್ಯಯನಗಳು ಬಹುತೇಕವಾಗಿ ಸ್ವಂತ ಆಸಕ್ತಿಯಿಂದ ಪ್ರೇರಿತವಾದಂಥವು, ಅಲ್ಲಿಯವರೆಗೆ, ಸಂಗ್ರಹಕಾರ್ಯ ಕೈಗೊಳ್ಳುವವರಿಗೆ ಜಾನಪದವನ್ನು ಕುರಿತಾದ ವ್ಯವಸ್ಥಿತ ತರಬೇತಿ ಇರಲಿಲ್ಲ. ಹಳ್ಳಿಯ ಜನರ ಶ್ರೀಮಂತ ಕಾವ್ಯ ಸಂಪತ್ತು ಅಳಿದುಹೋಗುತ್ತದೆ, ಅದನ್ನು ಬೇಗ ಸಂಗ್ರಹಿಸಿ ಕಾಪಾಡಬೇಕು ಎಂಬ ಕಳಕಳಿಯೇ ಸಂಗ್ರಹದ ಮುಖ್ಯ ಪ್ರೇರಣೆಯಾಗಿತ್ತು. ಅವರಿಗೆ ಸಂಗ್ರಹಕಾರ್ಯವೇ ಪ್ರಧಾನವಾಗಿದ್ದು, ವಿಶ್ಲೇಷಣೆ ಅಷ್ಟೇನೂ ಮುಖ್ಯವಾಗಿರಲಿಲ್ಲ. ಆದರೂ ಆ ಕಾಲದ ಸಂಗ್ರಹಗಳು ಜನಪದ ಸಾಹಿತ್ಯದ ಶ್ರೀಮಂತಿಕೆ, ವೈವಿಧ್ಯ ಆಳ ವಿಸ್ತಾರಗಳನ್ನು ತೆರೆದುತೋರುತ್ತದೆ. ಸಾಹಿತ್ಯಕ ದೃಷ್ಟಿಯಿಂದ ಅತ್ಯುತ್ತಮವೆನ್ನಬಹುದಾದ ಸಂಕಲನಗಳು ಆ ಕಾಲದಲ್ಲಿ ಪ್ರಕಟವಾಗಿವೆ.

೧೯೭೦ ರ ನಂತರ ಜಾನಪದ ಅಧ್ಯಯನ ಇನ್ನಷ್ಟು ಖಚಿತ ಪರಿಕಲ್ಪನೆಗಳ ತಳಹದಿಯ ಮೇಲೆ ನಡೆಯತೊಡಗಿತು. ಹೊಸ ಪೀಳಿಗೆಯ ವಿದ್ಯಾವಂತರು ಮತ್ತು ತಜ್ಞರು ಜಾನಪದದಲ್ಲಿ ಆಸಕ್ತಿ ವಹಿಸತೊಡಗಿದರಷ್ಟೇ ಅಲ್ಲ, ಜಾನಪದವನ್ನೇ ತಮ್ಮ ಪೂರ್ಣಾವಧಿಯ ಅಧ್ಯಯನ ಮತ್ತು ಸಂಶೋಧನೆಯ ಕ್ಷೇತ್ರವಾಗಿ ಆಯ್ದುಕೊಂಡರು.

೧೯೬೬ ರ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜನಪದ ಸಾಹಿತ್ಯವನ್ನು ಕನ್ನಡ ಎಂ. ಎ. ತರಗತಿಗಳಿಗೆ ಐಚ್ಚಿಕ ವಿಷಯವನ್ನಾಗಿ ಗೊತ್ತು ಮಾಡಲಾಯಿತು. ಆನಂತರ ಪೂರ್ಣಪ್ರಮಾಣದ ಜಾನಪದ ಸ್ನಾತಕೋತ್ತರ ಪದವಿ ತರಗತಿಗಳೂ ಆರಂಭವಾದವು. ಶಾಸ್ತ್ರೀಯ ಹಾಗೂ ಕಲಾದೃಷ್ಟಿಯಿಂದ ಉತ್ಕೃಷ್ಟವೆಂದು ಕರೆಯಬಹುದಾದ ಜಾನಪದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಯಿತು. ಜಾನಪದ ಸಂಗ್ರಹ, ಸಂಶೋಧನೆಗಳಿಗೆ ಪ್ರೋತ್ಸಾಹ, ಜಾನಪದ ಗ್ರಂಥಗಳ ಪ್ರಕಟಣೆ, ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಜಾನಪದ ಕ್ಷೇತ್ರಕಾರ್ಯ ತಜ್ಞರನ್ನು ಕಳುಹಿಸಿ ಅಲ್ಲಿನ ಜಾನಪದ ಪ್ರಕಾರಗಳನ್ನು ಸಂಗ್ರಹಿಸಿ ಮಸ್ತಕರೂಪದಲ್ಲಿ ಪ್ರಕಟಿಸುವುದು ಇವೇ ಮೊದಲಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಕೆಲಸಗಳು ಅತ್ಯಂತ ವ್ಯವಸ್ಥಿತವಾಗಿ ನಡೆಯತೊಡಗಿದವು. ಹೀಗೆ ಮೈಸೂರು ವಿಶ್ವವಿದ್ಯಾನಿಲಯ ಕರ್ನಾಟಕದ ಇತರ ವಿಶ್ವವಿದ್ಯಾನಿಲಯಗಳಲ್ಲಿ, ಬೇರೆ ಬೇರೆ ಪ್ರದೇಶಗಳಲ್ಲಿ ಅಧ್ಯಯನ ನಡೆಯುವುದಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟಿತು. ಇದಾದ ಆನಂತರ ಜಾನಪದ ಬಗ್ಗೆ ಕರ್ನಾಟಕದ ಎಲ್ಲೆಡೆಯಲ್ಲೂ ಸಮಾನವಾದ ಆಸಕ್ತಿ ವ್ಯಕ್ತವಾಗತೊಡಗಿತು. ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ ಆದಮೇಲೆ ಜನಪದ ಸಾಹಿತ್ಯವನ್ನು ಕನ್ನಡ ಎಂ. ಎ. ತರಗತಿಗಳಿಗೆ ಐಚ್ಚಿಕ ವಿಷಯವನ್ನಾಗಿ ಜೊತೆಗೆ ಇತರ ಜ್ಞಾನ ಶಿಸ್ತಿನಲ್ಲಿ ಅಧ್ಯಯನ ಮಾಡಲು ಗೊತ್ತು ಮಾಡಲಾಯಿತು. ಕ್ಷೇತ್ರಕಾರ್ಯದ ಸ್ವರೂಪ ವ್ಯಕ್ತಿಗಳ ಮೂಲಧಾಟಿಯಲ್ಲಿ ಪಠ್ಯವನ್ನು ಸಂಗ್ರಹಿಸಬೇಕಾದ ಅವಶ್ಯಕತೆ, ಜಾನಪದದ ಬೇರೆ ಬೇರೆ ಪ್ರಕಾರಗಳ ಬಗ್ಗೆ ಅರಿವು ಮಾಡಿದರು. ಜನಪದದ ಯಾವುದಾದರೊಂದು ವಿಷಯವನ್ನು ಅಂತರ್ ಶಿಸ್ತೀಯ ದೃಷ್ಟಿಯಿಂದ ಅಧ್ಯಯನ ಮಾಡುವುದಕ್ಕೆ ಡಾ. ಎಂ. ಚಿದಾನಂದಮೂರ್ತಿಯವರ ಬರಹಗಳು ಮಾದರಿಯಾದವು. ಉತ್ತರ ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ವಿಶ್ಲೇಷಣೆಯ ಕ್ಷೇತ್ರದಲ್ಲಿ ದುಡಿದವರಲ್ಲಿ ಎಂ. ಎಸ್. ಬಲ್ಲೆ, ಎಂ.ಜಿ. ಬಿರಾದರ, ಎಂ. ಎಂ. ಕಲಬುರ್ಗಿ, ಸೋಮಶೇಖರ ಇಮ್ರಾಪುರ, ಚನ್ನಣ್ಣ ವಾಲೀಕರ, ದೇವೇಂದ್ರ ಕುಮಾರ ಕಾರಿ, ವೃಷಭೇಂದ್ರಸ್ವಾಮಿ, ಶಿವಾನಂದ ಗುಬ್ಬಣ್ಣನವರ್. ಎಂ. ಎಸ್. ಸುಂಕಪೂರ, ಹಿರೇಮಠ ಮೊದಲಾದ ವಿದ್ವಾಂಸರು ಮುಖ್ಯರಾಗಿದ್ದಾರೆ.

ಜಾನಪದ ಕ್ಷೇತ್ರದಲ್ಲಿ ವಿದ್ವಾಂಸರ ಆಸಕ್ತಿ ನೆಲೆಗೊಂಡ ನಂತರ ಜನಪದ ಗೀತೆಗಳ ಜೊತೆಗೆ ಜನಪದ ಸಾಹಿತ್ಯದ ಇತರ ಪ್ರಕಾರಗಳತ್ತಲೂ, ಜಾನಪದದ ಇನ್ನಿತರ ವಿಷಯಗಳ ಬಗ್ಗೆಯೂ ಗಮನ ಹರಿಯಿತು. ಅಲ್ಲೊಂದು ಇಲ್ಲೊಂದರಂತ ಕಾಣಿಸಿಕೊಳ್ಳುತ್ತಿದ್ದ ಕಥಾ ಸಂಗ್ರಹಗಳು ಅರವತ್ತರ ದಶಕದ ನಂತರ ವಿಪುಲವಾಗಿ ಪ್ರಕಟವಾಗತೊಡಗಿದವು. ನಾಡಿನ ಉದ್ದಗಲಕ್ಕೂ ಮೂಲೆ ಮೂಲೆಗೂ ಕಥೆಗಳ ಸಂಗ್ರಹಕಾರ್ಯ ವಿಸ್ತರಿಸಿತು. ಸಾಮಾನ್ಯವಾಗಿ ಕಥಾ ಸಂಗ್ರಹದಲ್ಲಿ ತೊಡಗಿಕೊಂಡವರೆಲ್ಲರೂ ಶಾಸ್ತ್ರೀಯ ಕ್ರಮಗಳನ್ನೇ ಅನುಸರಿಸಿದ್ದು, ಸಂಗ್ರಹಗಳಲ್ಲಿ ಇನ್ನಿತರ ಲೋಪ ದೋಷಗಳೇನೇ ಇದ್ದರೂ ಜಾನಪದ ಅಧ್ಯಯನದ ದೃಷ್ಟಿಯಿಂದ ಇವೆಲ್ಲವಕ್ಕೂ ತನ್ನದೇ ಆದ ಬೆಲೆಯಿದೆ, ಕಥೆಗಳ ಸಂಗ್ರಹಕ್ಕೆ ಜೀಶಂಪ ಅವರ 'ಕನ್ನಡ ಜನಪದ ಕಥೆಗಳು' ಉತ್ತಮ ತಳಹದಿ ಒದಗಿಸಿತು. ದೇಶಂಪ ಆವರಿಗೂ ಮೊದಲೇ ಉತ್ತಮ ಸಂಗ್ರಹಗಳನ್ನು ಪ್ರಕಟಿಸಿದ ಕೀರ್ತಿ ಧವಳಶ್ರೀಯವರಿಗೆ ಸಲ್ಲುತ್ತದೆ. 'ಜನಪದ ಕಥಾಮೃತ' ವೆಂಬ ಎರಡು ಸಂಪುಟಗಳಲ್ಲಿ ಅವರು ಕನ್ನಡದ ಅತ್ಯುತ್ತಮ ಕಥಾ ಮಾದರಿಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಮೋ. ಡಿ. ಲಿಂಗಯ್ಯ ಅವರು ಪಡಿನೆರಳು, ಮಣ್ಣಿನ ಮುಡಿತ, ಜನಪದ ಕಥಾಸಂಗಮ ಎಂಬ ಮೂರು ಸಂಗ್ರಹಗಳನ್ನು ಪ್ರಕಟಿಸಿದ್ದು, ಸ್ವಾರಸ್ಯಕರ ಕಥೆಗಳಿಗೆ ಹಾಗೂ ಮೂಲಶೈಲಿಯಲ್ಲಿನ ದಾಖಲಾತಿಗೆ ಒಳ್ಳೆಯ ನಿದರ್ಶನವಾಗಿವೆ.

ದಕ್ಷಿಣ ಕರ್ನಾಟಕಕ್ಕಿಂತ ಉತ್ತರ ಕರ್ನಾಟಕದ ಸಂಕಲನಗಳು ತಡವಾಗಿ ಪ್ರಕಟವಾದರೂ ಅಲ್ಲಿಯ ಪ್ರಾತಿನಿಧಿಕ ಸಂಕಲನಗಳು ಈಗ ಸಾಕಷ್ಟು ಪ್ರಕಟವಾಗಿವೆ. ಸಿಂಪಿ ಲಿಂಗಣ್ಣನವರು ಕೇಂದ್ರ ಸಾಹಿತ್ಯ ಅಕಾಡಮಿಗಾಗಿ ಸಂಪಾದಿಸಿಕೊಟ್ಟ ಉತ್ತರ ಕರ್ನಾಟಕ ಜನಪದ ಕಥೆಗಳು, ಕೆ.ವಿರೂಪಾಕ್ಷಗೌಡ, ಕಲ್ಲೇಶ ಇಟ್ಟಿಯವರ ನಮ್ಮ ಹಳ್ಳಿಯ ಕಥೆಗಳು, ಬಿ. ಎಸ್. ರಾಜಪ್ಪನವರ ಧಾರವಾಡ ಜಿಲ್ಲೆ, ರಾಯಚೂರು ಜಿಲ್ಲೆ, ಬೆಳಗಾವಿ ಜಿಲ್ಲೆಗಳ ಮೂರು ಕಥಾ ಸಂಕಲನಗಳು, ಇವೇ ಮೊದಲಾದುವು ಉತ್ತರ ಕರ್ನಾಟಕದ 'ಕಥಾಮಾರ್ಗಗಳು ಹಾಗೂ ಅಲ್ಲಿನ ಭಾಷಾ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸಿವೆ.

ಗಾದೆಗಳಿಗೆ ಸಂಬಂಧಿಸಿದಂತೆ ಜನಪದ ಸಾಹಿತ್ಯದ ಅಭ್ಯಾಸದ ಆರಂಭದಿಂದಲೂ ಸಾಕಷ್ಟು ಆಸಕ್ತಿ ವ್ಯಕ್ತವಾಗಿದ್ದು ಸಾಕಷ್ಟು ಸಂಖ್ಯೆಯಲ್ಲಿ ಗಾದೆಗಳ ಸಂಗ್ರಹಗಳು ಪಟವಾಗಿವೆ. ಎಚ್. ಎಸ್. ಅಚ್ಚಪ್ಪನವರು ಸುಮಾರು ೧೬೫ ಕ್ಕೂ ಹೆಚ್ಚಿನ ಗ್ರಂಥಗಳಿಂದ ಗಾದೆಗಳನ್ನು ಆಯ್ದು ಪ್ರಕಟಿಸಿರುವ ಗ್ರಂಥಸ್ಥ ಗಾದೆಗಳು ಎಂಬ ಮಸ್ತಕದಲ್ಲಿ ೨೦,೦೦೦ಕ್ಕೂ ಹೆಚ್ಚು ಗಾದೆಗಳಿವೆ. ಗಾದೆಗಳ ಸಂಗ್ರಹ ಮತ್ತು ವಿಶ್ಲೇಷಣೆಗೆ ಸಂಬಂಧಿಸಿದಂತೆ ರಾಗೌ ಹಾಗೂ ಸುಧಾಕರ ಅವರು ಕನ್ನಡ ತೆಲುಗು ತಮಿಳು

ಮಲಯಾಳಂನಲ್ಲಿನ ಸಮಾನ ಗಾದೆಗಳನ್ನು ತಮ್ಮ ನಾಲ್ ನುಡಿ–ನಾಣ್‌ನುಡಿ ಎಂಬ ಸಂಗ್ರಹದಲ್ಲಿ ಕೊಟ್ಟಿದ್ದಾರೆ. ಎ.ಕೆ.ರಾಮಾನುಜನ್ ಅವರ ಗಾದೆಗಳು ಎಂಬ ಪ್ರಚಾರೋಪನ್ಯಾಸ ಮಾಲೆಯ ಮಸ್ತಕದಲ್ಲಿ ಗಾದೆಗಳ ಉಗಮ ವಿಕಾಸ ಸ್ವರೂಪ: ಪ್ರಾಚೀನತೆ ಮೊದಲಾದುವುಗಳ ಬಗ್ಗೆ ಖಚಿತವಾದ ಅಭಿಪ್ರಾಯಗಳು ವ್ಯಕ್ತವಾಗಿವೆ. ಗಾದೆಗಳ ಸಂಗ್ರಹ ತೃಪ್ತಿಕರವಾಗಿದ್ದರೂ ಅವುಗಳ ವರ್ಗೀಕರಣ, ವಿಶ್ಲೇಷಣೆ ಹಾಗೂ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕುರಿತಾಗಿ ಇನ್ನೂ ಹೆಚ್ಚಿನ ಕೆಲಸ ನಡೆಯಬೇಕಾಗಿದೆ.

ಸ್ವಾತಂತ್ರ್ಯಪೂರ್ವ ಕಾಲಕ್ಕಿಂತ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೇ ಒಗಟುಗಳ ಸಂಗ್ರಹಗಳು ಹೆಚ್ಚು ಸಂಖ್ಯೆಯಲ್ಲಿ ಬಂದಿವೆ: ಸುಧಾಕರ ಅವರು ಒಗಟುಗಳ ಸಂಗ್ರಹ ಮತ್ತು ವಿಶ್ಲೇಷಣೆಗೆ ಹೆಸರಾಗಿದ್ದಾರೆ. ಇತ್ತೀಚಿಗೆ ಸೋಮಶೇಖರ ಇಮ್ರಾಪುರ ಅವರು ಜಾನಪದ ಒಗಟುಗಳನ್ನು ಕುರಿತು ಅಧ್ಯಯನ ಮಾಡಿ: ಡಾಕ್ಟರೇಟ್ ಪದವಿ ಗಳಿಸಿದ್ದಾರೆ. ಆದಾಗ್ಯೂ ಒಗಟುಗಳ ವರ್ಗೀಕರಣ, ವಿಶ್ಲೇಷಣೆಯ ದಿಸೆಯಲ್ಲಿ ಗಂಭೀರವಾದ ಅಧ್ಯಯನಗಳೇನೂ ಇದುವರೆಗೆ ನಡೆದಿಲ್ಲ.

ಜಾನಪದ ಸಾಹಿತ್ಯೇತರ ಪ್ರಕಾರಗಳ ಬಗ್ಗೆಯೂ ಇತ್ತೀಚೆಗೆ ಹೆಚ್ಚು ಕೆಲಸ ನಡೆಯುತ್ತಿವೆ. ಮುಖ್ಯವಾಗಿ ಜಾನಪದದ ಕಲಾಪ್ರಕಾರಗಳಲ್ಲಿ ಬಯಲಾಟ ಯಕ್ಷಗಾನ ಕಲೆ ಕುರಿತು ಕೆಲವು ಗಮನಾರ್ಹ ಪ್ರಯತ್ನಗಳಾಗಿವೆ. ಆದರೆ ಯಕ್ಷಗಾನ ಕಲೆ ಕುರಿತಂತೆ ಬಂದಷ್ಟು ಗಂಥಗಳು ಬಯಲುಸೀಮೆಯ ರಂಗಭೂಮಿ ಪ್ರಕಾರಗಳ ಬಗ್ಗೆ ಬಂದಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಆಸಕ್ತರು ಯಕ್ಷಗಾನ ಪ್ರಸಂಗಗಳನ್ನು ಸಂಪಾದಿಸಿ ಪ್ರಕಟಿಸಿರುವುದಷ್ಟೇ ಅಲ್ಲದೆ ಅಲ್ಲಿನ ಅಭಿನಯ, ವೇಷಭೂಷಣ, ಸಂಗೀತ, ಪಾತ್ರಗಳು, ಯಕ್ಷಗಾನದ ಹೆಸರಾಂತ ಕಲಾವಿದರ ಬಗ್ಗೆಯೂ ಅಧ್ಯಯನ ನಡೆಸಿ ಗ್ರಂಥಗಳನ್ನು ಪಕಟಿಸಿದ್ದಾರೆ. ಉತ್ತರ ಕರ್ನಾಟಕದ ಜಾನಪದ ರಂಗಭೂಮಿ ಎಂಬ ಗ್ರಂಥದಲ್ಲಿ ಚಂದ್ರಶೇಖರ ಕಂಬಾರರು ಬಯಲಾಟದ ಪ್ರಕಾರಗಳು ಮತ್ತು ಅವುಗಳ ತಂತ್ರ ಶೈಲಿ ಇತ್ಯಾದಿಗಳ ಬಗ್ಗೆ ವಿವೇಚಿಸಿದ್ದಾರೆ. ಅಪರಾಳ ತಮ್ಮಣ್ಣ ರಚಿಸಿದ ಶ್ರೀಕೃಷ್ಣಪಾರಿಜಾತ ಎಂಬ ಸಣ್ಣಾಟದ ಕೃತಿಯನ್ನು ಆರ್. ಜಿ. ಕುಲಕರ್ಣಿಯವರು ಸಂಪಾದಿಸಿದ್ದಾರೆ. ರಂಗಭೂಮಿಯನ್ನು ಬಿಟ್ಟು ಇತರ ಕಲಾಪ್ರಕಾರಗಳ ಬಗ್ಗೆ ಆಮೂಲಾಗವಾದ ಅಧ್ಯಯನಗಳು ಹೆಚ್ಚು ನಡೆದಿಲ್ಲ. ಜನಪದ ವೈದ್ಯ, ಜನಪದ ನಂಬಿಕೆ, ಸಂಪ್ರದಾಯ, ಆಚರಣೆ ಮುಂತಾದ ವಿಷಯಗಳ ಬಗ್ಗೆ ಗಮನಾರ್ಹ ಗ್ರಂಥಗಳು ಪ್ರಕಟವಾಗಿವೆ. ಪ್ರೊ., ಹಿ. ಚಿ. ಬೋರಲಿಂಗಯ್ಯ ಅವರ ಉಜ್ಜನಿ ಚೌಡಮ್ಮ, ಮುಖ್ಯವಾದುದು. ಒಟ್ಟಿನಲ್ಲಿ, ಇತ್ತೀಚಿನ ದಿನಗಳಲ್ಲಿ, ಕನ್ನಡ ಜಾನಪದ ಅಧ್ಯಯನ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಉತ್ಸಾಹದಿಂದ ನಡೆಯುತ್ತಿರುವುದು ಸಂತೋಷದ ವಿಷಯವಾಗಿದೆ.

**ಪರಾಮರ್ಶನ ಗ್ರಂಥಗಳು**

೧. ಜಾನಪದ ಸ್ವರೂಪ – ಡಾ. ಹಾ.ಮಾ.ನಾ.

೨. ಸೈದ್ಧಾಂತಿಕ ಜಾನಪದ – ಅಂಬಳಿಕ ಹಿರಿಯಣ್ಣ

೩. ಜಾನಪದ ಸಿದ್ಧಾಂತಗಳು – ವೀರಣ್ಣ ದಂಡೆ

೫. ಜಾನಪದ ತತ್ವಗಳು ಮತ್ತು ಸಿದ್ಧಾಂತಗಳು – ಅಂಬಳಿಕೆ ಹಿರಿಯಣ್ಣ

೬. ಜಾನಪದ ದರ್ಶನ – ಕರ್ನಾಟಕ ವಿ.ವಿ. ಜಾನಪದ ಅಕಾಡೆಮಿ

೭. ಕರ್ನಾಟಕ ಜಾನಪದ – ಜಾನಪದ ಅಕಾಡೆಮಿ

೮. ಜಾನಪದ ಸಾಹಿತ್ಯ – ಗಿರಡ್ಡಿ ಗೋವಿಂದರಾಜ

೯. ಜಾನಪದ ವೀಕ್ಷಣೆ – ಅಂಬಳಿಕೆ ಹಿರಿಯಣ್ಣ

೧೦. ಜಾನಪದ ಕಾವು – ಸಂ. ಆರ್. ಎ. ಎಸ್. ಸುಂದರಂ, ಮೈಸೂರು ವಿಶ್ವವಿದ್ಯಾಲಯ

೧೧. ಜಾನಪದ ಸಮೀಕ್ಷೆ – ಜೀ.ಶಂ.ಪರಮಶಿವಯ್ಯ